ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ 20ನೇ ಸೆಪ್ಟೆಂಬರ್ 1995 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ ಕುಮಾರ್)**

ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬೀದರ್ ಜಿಲ್ಲೆಯಲ್ಲಿ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿರುವ ಖಾಲಿ ಹುದ್ದೆಗಳ ಭರ್ತಿ.

376 - ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ(ಬೀದರ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಇರುವ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಜ್ಯೂನಿಯರ್ ಕಾಲೇಜು ಹಾಗೂ ಸರ್ಕಾರಿ ಟಿ.ಸಿ.ಹೆಚ್ ಕಾಲೇಜು ಸಂಖ್ಯೆ ಎಷ್ಟು, (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಇವುಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು ಭಾಷಾವಾರು ಅಂಕಿ ಅಂಶಗಳನ್ನು ತಾಲ್ಲೂಕುವಾರು ವಿವರಗಳಲ್ಲಿ ಒದಗಿಸುವುದು.

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ)	ಪ್ರಾಥಮಿಕ ಶಾಲೆ	758
	ಪ್ರೌಢಶಾಲೆ	69
	ಟಿ.ಸಿ.ಹೆಚ್. ಕಾಲೇಜು	2
	ಪದವಿ ಪೂರ್ವ ಕಾಲೇಜು	18

ತಾಲ್ಲೂಕುವಾರು ವಿವರದ ಪಟ್ಟಿ ಲಗತ್ತಿಸಿದೆ.

ಆ) ಬೋಧಕ ಹುದ್ದೆಗಳು 287

ಬೋಧಕೇತರ ಹುದ್ದೆ 82

ತಾಲ್ಲೂಕುವಾರು ವಿವರದ ಪಟ್ಟಿ ಲಗತ್ತಿಸಿದೆ.

ಇ) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಶೇ.5ರಷ್ಟು ಖಾಲಿ ಹುದ್ದೆಗಳನ್ನು ಅಕ್ಟೋಬರ್ 95ರೊಳಗೆ ತುಂಬಲು ಸರ್ಕಾರಿ ಆದೇಶದಂತೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರನ್ನು ತುಂಬುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆಯು ಸರ್ಕಾರದ ಅಂತಿಮ ಪರಿಶೀಲನೆಯಲ್ಲಿದ್ದು ಈ ನಿಯಮಗಳು ಜಾರಿಗೆ ಬಂದ ಕೂಡಲೇ ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಲೋಕಸೇವಾ ಆಯೋಗವು ಉಪನ್ಯಾಸಕರ ಆಯ್ಕೆಯ ಪ್ರಕ್ರಿಯೆ ಪ್ರಾರಂಭಿಸಿದೆ. ಆಯ್ಕೆಯ ಪಟ್ಟಿ ಸ್ವೀಕರಿಸಿದ ಕೂಡಲೇ ಹುದ್ದೆಗಳನ್ನು ತುಂಬಲಾಗುವುದು.

ಅನುಬಂಧ - 1

ತಾಲ್ಲೂಕುವಾರು ವಿವರದ ಪಟ್ಟಿ.

ಬೀದರ್ ಜಿಲ್ಲೆಯ ತಾಲ್ಲೂಕುಗಳ ಹೆಸರು	*ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ*	*ಪ್ರೌಢಶಾಲೆಗಳ ಸಂಖ್ಯೆ*	*ಪದವಿ ಪೂರ್ವ ಕಾಲೇಜುಗಳ*	*ಶಿಕ್ಷಕರ ತರಬೇತಿ ಕೇಂದ್ರಗಳ ಸಂಖ್ಯೆ*
1) ಔರಾದ್	175	16	02	
2) ಬಸವಕಲ್ಯಾಣ	172	16	02	
3) ಬಾಲ್ಕಿ	148	17	02	
4) ಬೀದರ್	156	09	03	02
5) ಹುಮನಾಬಾದ್	107	11	08	
ಒಟ್ಟು	758	69	18	02

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಮಾನ್ಯ ಅಧ್ಯಕ್ಷರೇ, ನನ್ನದು ಉಪ ಪ್ರಶ್ನೆ ಇದೆ. ನಾನು ಒಂದು ಪ್ರಶ್ನೆಯನ್ನು ಏನು ಕೇಳಿದ್ದೆ ಎಂದರೆ ಈಗಾಗಲೇ ಖಾಲಿ ಇರುವ ಬೋಧಕರ ಹುದ್ದೆಗಳ ಸಂಖ್ಯೆ ಎಷ್ಟು

ಎಂದು. ಭಾಷಾವಾರು ಅಂಕೆ ಮತ್ತು ತಾಲ್ಲೂಕುವಾರು ಪಟ್ಟಿಯನ್ನು ಕೊಡಬೇಕೆಂದು ಕೇಳಿದ್ದೆ. ತಾವು ತಾಲ್ಲೂಕುವಾರು ಪಟ್ಟಿಯನ್ನು ಕೊಟ್ಟಿರುತ್ತೀರಿ ಭಾಷಾವಾರು ಪಟ್ಟಿಯು ನಮಗೆ ಬಂದಿಲ್ಲ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಖಾಲಿರುವ ಭೋದಕರ ಮತ್ತು ಭೋದಕೇತರ ಹುದ್ದೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ಅದನ್ನು ಕೊಟ್ಟಿದ್ದೇವೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ಭಾಷಾವಾರು ಅಂಕಿ ಅಂಶಗಳನ್ನು, ತಾಲ್ಲೂಕುವಾರು ವಿವರಗಳಲ್ಲಿ ಒದಗಿಸುವುದು ಎಂದು ಇದೆ. ಇದರಲ್ಲಿ ಇಲ್ಲವೆ? ತಂದುಕೊಡುವುದಕ್ಕೆ ಹೇಳುತ್ತೇವೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ಇಲ್ಲ ಸರ್, ನಮ್ಮದು ಗಡಿ ಪ್ರದೇಶದ ಜಿಲ್ಲೆಯಾಗಿದೆ. ಕನ್ನಡ, ಮರಾಠಿ ಮತ್ತು ಉರ್ದು ಹೆಚ್ಚಾಗಿ ಜನರು ಓದುತ್ತಾರೆ. ಅಲ್ಲಿ ಲೆಕ್ಚರರ್ ಇಲ್ಲ. ಹೈಸ್ಕೂಲಿನಲ್ಲಿಯು ಮತ್ತು ಪ್ರೈಮರಿ ಶಾಲೆಗಳಲ್ಲಿಯೂ ಇದೆ ತೊಂದರೆ. ಇದನ್ನು ಬೇಕಂತಲೇ ಇದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳು ತಮಗೆ ಮಾಹಿತಿಯನ್ನು ಕೊಟ್ಟಿಲ್ಲ. ಇದನ್ನು ನಮ್ಮ ಭಾಗದಲ್ಲಿರತಕ್ಕಂತಹ ಅಧಿಕಾರಿಗಳು ಇದರ ಬಗ್ಗೆ ತಾರತಮ್ಯವನ್ನು ಮಾಡಿ ಮಾಹಿತಿಯನ್ನು ಕೊಟ್ಟಿಲ್ಲ. ಇದನ್ನು ಬೇಕಂತಲೇ ಮಾಡುತ್ತಾರೆ. ಇದೇ ಪ್ರಶ್ನೆಯನ್ನು ಮೂರನೇಸಾರಿ ತಮಗೆ ಕೇಳಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕಳಕಳಿ ಏನು ಎಂದು ನಮಗೆ ಅರ್ಥವಾಗಿದೆ. ಇದುವರೆಗೂ ಹೆಚ್ಚಿನ ಸಂಖ್ಯೆಯಲ್ಲಿ ಈ ರೀತಿಯಾಗಿ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುತ್ತಿರಲಿಲ್ಲ. ಈ ವರ್ಷ 18,600 ಉಪಾಧ್ಯಾಯರುಗಳನ್ನು ನೇಮಕ ಮಾಡುವುದರಿಂದ, ಈ ಸಮಸ್ಯೆಯು ಬಗೆಹರಿಯುತ್ತದೆ. ತಮ್ಮ ತೊಂದರೆಗಳು ಏನಿದೆ ಅಲ್ಲಿ ಉಪಾಧ್ಯಾಯರುಗಳು ಇಲ್ಲವೆಂದು ಏನು ಹೇಳುತ್ತಿದ್ದೀರಿ ಕೂಡಲೇ ಇನ್ನು ಒಂದು ತಿಂಗಳಿನಲ್ಲಿ 29 ವರ್ಷ ತುಂಬಿರತಕ್ಕಂತಹ ನಿರುದ್ಯೋಗಿ ಉಪಾಧ್ಯಾಯರುಗಳನ್ನು ನೇಮಕಮಾಡಿಕೊಳ್ಳುತ್ತೇವೆ. ಬಾಕಿ ಉಳಿದಿರತಕ್ಕಂತಹ 9,000 ಉಪಾಧ್ಯಾಯರುಗಳನ್ನು 18 ವರ್ಷ ತುಂಬಿರತಕ್ಕಂತಹ ಉಪಾಧ್ಯಾಯರುಗಳನ್ನು ತೆಗೆದುಕೊಳ್ಳತಕ್ಕಂತಹ ಸಂದರ್ಭದಲ್ಲಿ ನಿಮ್ಮ ತೊಂದರೆಗಳು ಏನಿವೆ ಇವುಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನಪಡುತ್ತೇವೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ : ನನ್ನದೊಂದು ಮನವಿ ಇದೆ, ಏನೆಂದರೆ 10-15 ವರ್ಷಗಳಿಂದು ಪ್ರೈಮರಿ ಶಾಲೆಯಿಂದ ಹಿಡಿದು ಕಾಲೇಜಿನವರೆಗೂ ಯಾವುದೇ ಉರ್ದು ಮತ್ತು ಮರಾಠಿ ಉಪಾಧ್ಯಾಯರುಗಳನ್ನು ನೇಮಕಮಾಡಿಲ್ಲ. ಆದುದರಿಂದ ಈ ಸಾರಿ ಹೆಚ್ಚು ಉರ್ದು ಮತ್ತು ಮರಾಠಿ ಉಪಾಧ್ಯಾಯರುಗಳನ್ನು. ನೇಮಕಮಾಡಿಕೊಳ್ಳಬೇಕೆಂದು ತಮ್ಮ ಮೂಲಕ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಗಂಗಾಧರ ನಾಯಕರವರ ನಿಮ್ಮ ಪ್ರಶ್ನೆಗೆ ಉತ್ತರಿಸಬೇಕಾದ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಸದನದಲ್ಲಿ ಇಲ್ಲದಿರುವುದರಿಂದ ಅನಂತರ ತೆಗೆದುಕೊಳ್ಳಲಾಗುವುದು.